ಪ್ರಸಿದ್ಧ ಪತ್ರಿಕೆ.

ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಮಹಾಸ್ವಾಮಿಯವರ ಆಜ್ಞಾನುಸಾರ, ಆಳಿದ ಮಹಾಸ್ವಾಮಿಯವರಾದ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರವರಿಂದ ಕರ್ಣಾಟಕ ಭಾಷೆಯಲ್ಲಿ ವಾಕ್ಯರೂಪವಾಗಿ ವಿರಚಿತವಾದ ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಶ್ರೀಮನ್ಮಹಾಭಾರತದ ಕನ್ನಡದ ಟೀಕನ್ನು ಲೋಕೋಪಕಾರಾರ್ಥವಾಗಿರುವಂತೆ, 1884–85ನೇ ಇಸವಿಯಲ್ಲಿ ಮೈಸೂರು ಅರಮನೆಯ ಜಗನ್ಮೋಹನ ಮುದ್ರಾಕ್ಷರ ಶಾಲೆಯಲ್ಲಿ ವಿರಾಟಪರ್ವವನ್ನೂ ಉದ್ಯೋಗಪರ್ವವನ್ನೂ ಮುದ್ರಿಸಿ ಪ್ರಚಾರಪಡಿಸಿರುವ ವಿಷಯವು ಸರ್ವರಿಗೂ ವಿದಿತವಾಗಿರುವದಷ್ಟೆ.

ಶ್ರೀಮನ್ಮಹಾರಾಜರವರ ಆಜ್ಞೆಯಂ ಪಡೆದು ಉಳಿದಿದ್ದ ಹದಿನಾರು ಪರ್ವಗಳಲ್ಲಿ ಆದಿಪರ್ವವೂ ಸಭಾಪರ್ವವೂ ಬೆಂಗಳೂರಲ್ಲಿರುವ ಚಾಮುಂಡೇಶ್ವರಿ ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟು ಈಗ ಕ್ರಯಕ್ಕೆ ಸಿದ್ಧವಾಗಿರುತ್ತದೆ.

ಈಗ ನಮ್ಮಲ್ಲಿ ಕರ್ಣಪರ್ವವು ಮುದ್ರಿಸಲ್ಪಟ್ಟು ಕ್ರಯಕ್ಕೆ ಸಿದ್ಧವಾಗಿರುತ್ತದೆ. ಇದರ ಕ್ರಯವು ಪ್ರತಿ ಬಂದಕ್ಕೆ ರೂಪಾಯಿ 1—12—0, ಟಪಾಲ್ ಹಾಸಲ್ ಸಹಿತ ರೂಪಾಯಿ 2—0—0, ಬೇಕಾದವರು ಈ ಕೆಳಗೆ ರುಜು ಮಾಡಿರುವವರಿಗೆ ಕ್ರಯವನ್ನು ಕಳುಹಿಸಿ ಬರೆದರೆ ಪುಸ್ತಕವು ದೊರಿಯುತ್ತದೆ. ಈಗ ಅರಣ್ಯಪರ್ವವು ಮುದ್ರಣೆಯಲ್ಲಿರುತ್ತದೆ.

ಮೈಸೂರು,
16ನೇ ಏಪ್ರಿಲ್ 1890.

ಬಿ. ಜಿ. ರಾಜಪ್ಪ,
ಮೈಸೂರಲ್ಲಿರುವ ಸರಕಾರದ ಬ್ರಾಂಚ್ ಮುದ್ರಾಶಾಲೆಯ ಫೋರ್‌ಮ್ಯಾನ್.

ಹಾಸನ ಡಿಸ್ಟ್ರಿಕ್ಟ್.

1890ನೇ ಇಸವಿ 2ನೇ ಜೂ೯.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟ್ ಅರಸೀಕೆರೆ ತಾಲ್ಲೂಕಿನಲ್ಲಿ ಕುರಂಗದ ಕಲ್ಲುಗಳನ್ನ ಜಮಾ ಯಿಸಿಕೊಳ್ಳತಕ್ಕ ಹಕ್ಕುದಾರಿಯು ಸದರೀ ಅರಸೀಕೆರೆ ತಾಲ್ಲೂಕು ಕಚೇರಿಯಲ್ಲಿ ಸ೯ 1890ನೇ ಇಸವಿ ಜುಲೈ ತಾರೀಖು 2ನೇ ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜ್ ಮಾಡಲ್ಪಡುವದು.

2. ಅಮಲ್‌ದಾರ್ರು ಅಥವಾ ಶರಸ್ತೇದಾರ್ರು ಹರಾಜ್ ಮಾಡಿಸುವರು.

3. ಈ ಹರಾಜಿನ ಚಡದರಖಾಸ್ತು ಹಾಸನ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರಿಂದ ಹರಾಜ್ ಮಂಜೂರ್ಮಾಡಲ್ಪಡುವ-ವರೆಯಂತರ ಕಾಯಮಾದ್ದಾಗಿ ತಿಳಿದುಕೊಳ್ಳಕೂಡದು.

4. ಈ ಇಜಾರೆಯು ಸ೯ 1891ನೇ ಇಸವಿ ಮಾರ್ಚ್ 31ರ ವರಿಗೆ ಜಾರಿಯಲ್ಲಿ ಇರತಕ್ಕದ್ದು.

5. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಡಿಪಾ ಜಿಟ್ ಇಡಬೇಕಲ್ಲದೆ ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಡೆಪ್ಯೂಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟು ತಾರೀಖು ಮೊದ ಲು 7 ದಿವಸದ ಒಳಗಾಗಿ ಕ್ರಯದ ಪಟ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಬಂದಾಣೆಯಂತೆ ಆಗುವ ಲೋಕಲ್‌ಸೆಸ್ ದೇಖೀಲ್ ಬಾಕಿ ಕ್ರಯದ ಮೊಬಲಗನ್ನ ಸಾವತಿ ಮಾಡದಿದ್ದರೆ ಹಾಗೆ ಡಿಪಾಜಿಟ್ ಇಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡು ವದು ಹಾಗೆ ಡಿಪಾಜಿಟ್ಟು ಮೊಬಲಗು ಹಾಜರ್ಮಾಡದಿದ್ದರೂ ಅಥವಾ ಬಾಕಿ ಕ್ರಯದ ಮೊಬಲಗು ಸಾವತಿ ಮಾಡದಿದ್ದರೂ ಹಕ್ಕುದಾರಿ ಯು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ನುಕ್ಸಾನಿಗೂ ವಳಪಟ್ಟು ಪುನಹ ವಿಕ್ರಯಿಸಲ್ಪಡುವದು.

6. ಹರಾಜ್ ಷರತ್ತುಗಳು—

(a) ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳನ್ನು ತೆಗದುಕೊಳ್ಳಬೇಕಾದರೆ ಹಿಡುವಳಿದಾರನ ಸಮ್ಮತಿಯನ್ನ ಪಡಿಯಬೇಕು. ಜರ್ಮೀ ಹಿಡುವಳಿದಾರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲೂ ಕೂಡದು. ಇಜಾರೇದಾರನಿಗೆ ಮಾರಬೇಕೇ ಹೊರ್ತು ಇತರ ಜನಗಳಿಗೆ ಮಾರಲೂಕೂಡದು.

(b) ಇಜಾರ್‌ದಾರನು ಹುಲ್ಲುಬನ್ನಿ ಇಜಾರ್‌ದಾರರ ಚರಾವು ಹಕ್ಕಿನಲ್ಲಿ ಪ್ರವೇಶಿಸಕೂಡದು.

(c) ಬಂಜರು ಜಮೀನುಗಳು ಸಾಗುವಳಿ ಬಗ್ಯೆ ಪರಭಾರಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟುಬಿಡುವದಕ್ಕೆ ಕುರಂಗ ದ ಇಜಾರೆದಾರನು ಅಡ್ಡಿ ಹೇಳಕೂಡದು. ಅಂತಾ ಜಮೀನುಗಳಲ್ಲಿ ಕುರಂಗದ ಕಲ್ಲುಗಳನ್ನು ತೆಗದುಕೊಳ್ಳತಕ್ಕ ಹಕ್ಕು ಮಾತ್ರ ಇಜಾರೆದಾರನಿಗೆ ವುಂಟು ಇರುತ್ತೆ.

(d) ಇಜಾರೇದಾರನು ಕಲ್ಲುಗಳ್ಳಿಗೋಸ್ಕರ ಜಮೀನುಗಳನ್ನ ಅಗಿಯಕೂಡದು. ಬಂದು ವೇಳೆ ಹಾಗೆ ಅಗದಲ್ಲಿ ಆ ಗುಂಡಿಗಳನ್ನು ತಕ್ಷಣ ಮುಚ್ಚಿಬಿಟ್ಟು ಸಾಗುವಳಿಗೆ ಜಮೀನು ಲಾಯಖು ಇರುವ ಹಾಗೆ ಮಾಡಬೇಕು.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಾಸನ ಡಿಸ್ಟ್ರಿಕ್ಟ್ ಮಂಜರಾಬಾದ್ ಮತ್ತು ಹಾಸನ ತಾಲ್ಲೂಕುಗಳ ಈ ಕೆಳಗೆ ನಮೂದಾಗಲ್ಪಡುವ ಜಮೀನ್ ಕಾಫೀ ಸಾಗುವಳಿಗೋಸ್ಕರ ಇದರ ಕೆಳಗಿನ ಸ್ಪೇಷಿಮೆಂಟಿನ ಪ್ರಕಾರ ಕಾಲಂನಲ್ಲಿ ನಮೂದಾಗುವ ತಾರೀಖು ಮತ್ತು ಸ್ಥಳದಲ್ಲಿ ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮ್ಮಿಷನರವರ ರೂಬರೂಬ್ ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷ೯ ಸಾಹೆಬರವರ ಮಂಜೂರಾತಿಗೆ ವ್ಯೊಳಪಟ್ಟು ಹರಾಜು ಮಾಡಿಸಲ್ಪಡುವದು.

2. ಈ ಹರಾಜು ಬಹಿರಂಗವಾಗಿ ದಸ್ತೂರ್ ಪ್ರಕಾರ ಮತ್ತು ಅನುಸರಿಸಿ ಗೊತ್ತಾಗಲ್ಪಟ್ಟ ಎಕರೆಗೆ 10 ರೂಪಾಯಿಗಳ ಮೇಲೆ ಚಡ ದರಖಾಸ್ತು ಮಾಡುವವರ ಹೆಸರಿಗೆ ಖೈದ್ ಮಾಡಲ್ಪಡುವದು, ದರಖಾಸ್ತುದಾರನಿಂದ ಹಾಜರ್ಮಾಡಲ್ಪಟ್ಟು ಗೊತ್ತಾಗಲ್ಪಟ್ಟ ಖರೀದಿಯ ನಾಲ್ಕರಲ್ಲಿ ಬಂದಭಾಗ ಡಿಪಾಜಿಟ್ ಹಣವು ದರಖಾಸ್ತುದಾರನ ಹೆಸರಿಗೆ ಹರಾಜು ನಿಂತಪಕ್ಷ. ಅವನು ಈ ನೋಟೀಸು 4ನೇ ಕ್ಲಾಜ್ ಮೇರಿಗೆ ಕೊಡಬೇಕಾದ ಶೇಕಡಾ 25 ರೂಪಾಯಿ ಹರಾಜು ಹಣದ ಡಿಪಾಜಿಟ್ಟಿಗೆ ವಜಾ ಮಾಡಲ್ಪಡುವದು, ಮತ್ತು ಇತರರು ಚಡ ದರಖಾಸ್ತು ಮಾಡಿ ಅವರಿಗೇನೇ ನಿಂತಪಕ್ಷ ದರಖಾಸ್ತುದಾರನ ಶೇವಣಿಯು ವಾಪಸ್ ಮಾಡಲ್ಪಡುವದು.

3. ಗೊತ್ತಾಗಲ್ಪಟ್ಟ ಖರೀದಿಯು ಸರ್ವೇ ಖರ್ಚನ್ನು ಆಡಗಿಸಿಕೊಂಡು ಯಿರುತ್ತಲ್ಲದೆ ಸಂದಲ್ ವಿನಹ ವುಳಿಸಿಕೊಳ್ಳಲ್ಪಟ್ಟ ಜಾತಿಯಲ್ಲಮರಗಳ ಗವರ್ಮೆಂಟ್ ಹಕ್ಕನ್ನೂ ಶೇರಿಸಿಕೊಂಡು ಯಿರುತ್ತೆ, ಸಂದಲ್ ಯಾವಾಗ್ಯೂ ಸರ್ಕಾರದ ಹಕ್ಕಿನದೇ ಆಗಿ ಯಿರುತ್ತೆ.

4. ಚಡ ದರಖಾಸ್ತುದಾರನು ಹರಾಜು ಖೈದಾದ ವಡನೆಯೇ ಶೇಕಡಾ 25 ರೂಪಾಯಿಗಳ ಮೇರೆ ಕೊಡಬೇಕಲ್ಲದೆ ಬಾಕೀ ಹಣವನ್ನು ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಹರಾಜಾದ ತಾರೀಖು ಲಾಗಾಯತು 15ನೇ ತಾರೀಖಿನ ದಿವಸದ ಸೂರ್ಯಾಸ್ತಮಯದೊಳಗೆ ಕೊಡಬೇಕು, ಹಾಗೆ ಕೊಡದೇ ತಪ್ಪಿದಲ್ಲಿ ಡಿಪಾಜಿಟ್ ಯಿಟ್ಟ ಮೊಬಲಗು ದಂಡವಾಗಿ ತೆಗದುಕೊಳ್ಳುವದಲ್ಲದೇ ಹರಾಜಿನಲ್ಲಿ ತೆಗದುಕೊಂಡವನ ಅವಗುಣಕ್ಕಾಗಿ ಪುನಶ್ಚ ಹರಾಜು ಮಾಡಿಸಲ್ಪಡುವದು 2ನೇ ಹರಾಜಿನಲ್ಲಿ ಕಮ್ಮಿ ಆಗುವ ಹಣವನ್ನು ಮೊದಲ ಹರಾಜು ದಾರನಿಂದ ವಸೂಲ್ ಮಾಡಲ್ಪಡುತ್ತೆ.

5. ಈ ರೂಲ್ಸ್ ಅನುಸರಿಸಿ ಹರಾಜ್ ಮಾಡಲ್ಪಟ್ಟ ಜಮೀನು ಮೂರುವರುಷ ಮುಫತ್ತಾಗಿಯೂ ನಂತರ ಯರಡು ವರುಷ ಅರ್ಧ ಕಂದಾಯಕ್ಕೂ ಅರನೇ ವರುಷದಿಂದ ಪೂರಾ ಕಂದಾಯಕ್ಕೂ ಕೊಡಲ್ಪಡುವದು, ಈ ರಿಯಾಯತಿಯನ್ನು ತೋರಿಸುವದಕ್ಕೆ ಮುಂಚೆ ಚಡ ದರಖಾಸ್ತುದಾರನು ಸದರೀ ಜಮೀನಿನಲ್ಲಿ ಇರತಕ್ಕ ಸಾಗುವಳೀ ಲಾಯಕ್ ಪ್ರದೇಶವನ್ನು ನಿಜವಾಗಿಯೂ ಗಿಡಹಾಕುವದಕ್ಕೆ ಎತ್ನಪಡದೆ ಅಡವಿಯನ್ನು ತೆಗದು ಮರಗಳನ್ನು ಕಡಿದು ರಾಜೀನಾಮೆ ಕೊಟ್ಟಲ್ಲದೇ ಆದರೆ ಮೊದಲ ವರುಷದ ಲಾಗಾಯತು ಪೂರಾ ಕಂದಾಯವನ್ನೂ ಸರಕಾರಕ್ಕೆ ಕೊಡಲು ಬದ್ಧರಾಗಿ ಮುಚ್ಚಳಿಕೆ ಬರದುಕೊಡಬೇಕು.

ಸೈಟ್ ನಂಬರ್.	ದರಖಾಸ್ತುದಾರನ ಹೆಸರು.	ಜಮೀನು ಇರತಕ್ಕ ಗ್ರಾಮದ ಹೆಸರು.	ದರಖಾಸ್ತು ಜಮೀನು ವಿಸ್ತೀರ್ಣ.					ಪ್ರಕಾರ.
			ಎಕರೆ.		ಆಕಾರ.			
			ಎಕರೆ.	ಗುಂಟೆ.	ರೂ.	ಆ.	ಪೈ.	
112	ಜೆಸ್ಸೂರ್ ಘನ್ಯಾಂಜಪ್ಪಯನವರು	ಅಯಿದಣ್ಣೇನಮರಟಿರಂಗನ ಪಟ್ಟದವಾರೆ ಕಣಿವೆ, ಬಸವನಹಳ್ಳಿ ಹೊಸಕೊಟೆ ಹೋಬಳಿ ಮಂಜರಾಬಾದ್ ತಾಲ್ಲೂಕು 102ನೇ ಸರ್ವೆ ನಂ. ಪೈಕಿ	155	34	1—0—0 ಕಾಯಂ ದರ ಆಫತಾ 1—0—0 ಟಿಂಪರರಿ ದರ ಹರಾಜಿನಲ್ಲಿ ಹಿಡಿಯುವವರ ಯಿಷ್ಟಪ್ರಕಾರ			ಹಾಸನ ತಾ|| ಜನರಲ್ ಅಸಿಸ್ಟೆಂಟ್ ಕಮ್ಮಿಷನರವರು ಹಾಸನ ತಾಲ್ಲೂಕು ಸೋಮ್ಲಾಪುರ ಹೋಬಳಿ ಹಾಸನ ದೊಡ್ಡ ಗ್ರಾಮದಲ್ಲಿ 1890ನೇ ಇಸವಿ ಜುಲೈ 25ನೇ ತಾರೀಖು ಸಾಯ್ಂಕಾಲ 11 ಘಂಟೆಗೆ ಪ್ರಸಾಜಪಡುವರು.
91		ಹೊಸದಾಗಿ ಪೋಡಾದ್ದು ಗಜಗೊಂದಲ್‌ವಾರೆ ಆಡ್ಡಬೈಲ್ ಪೊನ್ನಾಥಪುರದ ಹೋಬಳಿ ಹಾಸನ ತಾಲ್ಲೂಕು 83ನೇ ಸರ್ವೆನಂ. ಪೈಕಿ ಹೊಸದಾಗಿ ಪೋಡಾದ್ದು	75	7				
54		ಬಿಳಿಗರವಳ್ಳಿ ಡಿಟೋ 17ನೇ ನಂ. ಪೈಕಿ ಡಿಟೋ	72	27				
51		ತಿಮ್ಮಲಾಪುರ ಡಿಟೋ 50ನೇ ನಂಬರ್ ಪೈಕಿ	58	3				
52		ಡಿಟೋ 22ನೇ ನಂ. ಪೈಕಿ	35	30				

ಸಿ. ಮಾದಯ್ಯ,
ಅಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್.